## 13

# ಪ್ರತಿ ದಿವಸ ದೇವರಿಗೆ ಸ್ಥಳಾವಕಾಶ ಮಾಡಿಕೊಡುವದು (4:13-17)

1987ನೇಯ ಶರತ್ಕಾಲದಲ್ಲಿ, ಪ್ರಪಂಚದಲ್ಲಿ ವಿಶೇಷವಾದ ಘಟನೆಗಳು ಜರುಗಿದ್ದವು. ಒಂದು ನಿರ್ದಿಷ್ಟವಾದ ವಿಷಯವು ಪ್ರತಿಯೊಬ್ಬರ ಆಲೋಚನೆಯಲ್ಲಿ ಎದ್ದು ಕಾಣುತ್ತಿತ್ತು. ಮೊದಲನೆಯದಾಗಿ, ಅಕ್ಟೋಬರಿನ ಒಂದು ಸೋಮವಾರ ಮುಂಜಾನೆ ಶೇರು ಮಾರುಕಟ್ಟೆಯು, ಐನೂರು ಅಂಶಗಳಷ್ಟು ಕುಸಿದಿತ್ತು. ಭ್ರಾಂತಿಗೊಳಗಾದ ಜನರು ತಮ್ಮ ವ್ಯವಹಾರ ಮತ್ತು ಭವಿಷ್ಯ ನಾಶವಾಯಿತು ಎಂದು ಮರುಗುತ್ತಿದ್ದರು. ದಳ್ಳಾಳಿಗಳು ತಮ್ಮ ಹಣದ ವ್ಯವಹಾರವು ಕೆಳಮಟ್ಟಕ್ಕೆ ಇಳಿಯಿತು ಎಂದು ಗೊಂದಲಕ್ಕೊಳ ಗಾದರು ಸುದ್ದಿ ಮಾಧ್ಯಮದವರು ಈ ಶೇರು ಮಾರುಕಟ್ಟೆಯ ಕುಸಿತದ ಬಗ್ಗೆ ಅರ್ಥಮಾಡಿಕೊಳ್ಳಲು, ಕೆಲವಾರು ವಾರಗಳೇ ಕಳೆದು ಹೋದವು. ಎರಡನೆಯ ಘಟನೆ ಏನೆಂದರೆ, ರೋನಾಲ್ಡ್ ರೇಗನ್ ಹಾಗೂ ಮೈಕಲ್ ಗೋರ್ಬಚೋವ್‌ರವರ ನಡುವೆ ಏರ್ಪಟ್ಟ "ಶೃಂಗಸಭೆ" ಈ ಸಭೆಯಲ್ಲಿ ಮುಖ್ಯ ವಾಗಿ ಶಾಂತಿಗಾಗಿ, ಅಣು ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಅದು ಒಂದು ಗುರುತರವಾದ ಮೈಲಿಗಲ್ಲಾಯಿತು. ರಷ್ಯಾನ್ನರು ಮತ್ತು ಅಮೇರಿಕನ್ನರ ನಡುವೆ ಉಂಟಾದ ಈ ಒಪ್ಪಂದವನ್ನು ಪ್ರತಿಪಾದಿಸಿಕೊಂಡರೂ, ಅದರ ಆಂತರ್ಯದಲ್ಲಿರುವ ವಿಷಯವು ಎದ್ದು ಕಾಣುತ್ತಿತ್ತು. ಕಳೆದ ಮೂವತ್ತು ವರ್ಷಗಳಲ್ಲಿ, ಇದೇ ಮೊದಲನೆಯಸಾರಿಯು, "ವಿಶೇಷವಾದ ಎರಡು ಶಕ್ತಿಗಳ" ಸಂಧಾನವಾಗಿರುತ್ತದೆ, ಇದು ಯುದ್ಧಾಸ್ತ್ರಗಳ ವ್ಯಚ್ಛ ನಿರ್ವಹಣೆಯ ಪ್ರಾರಂಭವಾಗಿತ್ತು. ಇದನ್ನು ಈ ಕೆಳಕಂಡತೆ ವಿಶ್ಲೇಷಿಸಬಹುದು. ತಮ್ಮಿಬ್ಬರ ಸೈನ್ಯದಲ್ಲಿ ತಲಾ ನೂರು ಮಂದಿ ಯೋಧರನ್ನು ಕಡಿತಗೊಳಿಸಿದರೂ, ಒಪ್ಪಂದದ ಮೇರೆಗೆ, ನಿಗದಿತವಾದ ಕ್ಷಿಪಣಿಗಳನ್ನು ನಾಶಪಡಿಸಿದರೂ, ಮೂರು ಅಥವಾ ನಾಲ್ಕು ಬಾರಿ ಭೂಮಿಯನ್ನು ನಾಶಪಡಿಸುವಷ್ಟು ಅಣುಯುದ್ಧಾಸ್ತ್ರಗಳನ್ನು ಅವರು ಹೊಂದಿಕೊಂಡಿದ್ದರು.

ಅಣ್ವಸ್ತ್ರಗಳ ಮತ್ತು ಆರ್ಥಿಕ ನೀತಿಯ ಕುರಿತಾದ ಪಾಠಗಳನ್ನು ಇಲ್ಲಿ ಕಲಿಸ ಬೇಕೆಂಬ ಉದ್ದೇಶಗಳಿರುವದಿಲ್ಲ, ಈ ಘಟನೆಗಳು ಕೆಲವು ಅಂಶಗಳನ್ನು ನಮಗೆ ತಿಳಿಸುತ್ತದೆ. ಮೊದಲನೆಯದಾಗಿ, ವಾಸ್ತವವಾಗಿರುವ ವಸ್ತುಗಳು ಈ ದಿನವಿದ್ದು, ನಾಳೆ ಇಲ್ಲದ್ದಾಗುತ್ತದೆ. ಎರಡನೆಯದಾಗಿ, ನಮ್ಮ ದೈಹೀಕವಾದ ಇರುವಿಕೆಯು ಪರಮಾಣು ಶಕ್ತಿಯ ನೆರಳಿನಲ್ಲಿ ವಾಸಿ ಸುತ್ತದೆ, ಮತ್ತು ಪ್ರಪಂಚದ ಕೆಟ್ಟ ರಾಜಕೀಯದ ಸ್ವಭಾವಕ್ಕೆ ಅಡಿಯಾಳಾಗಿರುತ್ತದೆ. ಸಹಜ ವಾದ, ಈ ಎರಡು ಪಾಠಗಳನ್ನು ನಮ್ಮ ಮನಸ್ಸಿನಲ್ಲಿ ಇಟ್ಟುಕೊಂಡು, ನಾವು ಆಜೀವನವನ್ನು ಮತ್ತು ಅದರ ಕಾರ್ಯಗಳನ್ನು ತಿಳುಕೊಳ್ಳ ಬಹುದು, ಮತ್ತು ಇಂಥಾ ಜೀವನದ ಮೇಲೆ ನಾವು ಭರವಸೆ ಇಡುವದು ಅಸಾಧ್ಯ. ಆದರೆ ನಮ್ಮ ವೈಯಕ್ತಿಕವಾದ ಜೀವಿತದಲ್ಲಿ "ನಿನ್ನ ಭವಿಷ್ಯದ ಜೀವಿತದ ಕುರಿತಾಗಿ ಏನು?" ಎಂಬ ಪ್ರಶ್ನೆಯನ್ನು ಕೇಳುವದಾದರೆ? ನಿನ್ನ ಉತ್ತರವೇನು? ವಿದ್ಯೆಯೇ? ಮದುವೆಯೇ? ಕುಟುಂಬವೇ? ದೂರದೇಶದ ಪ್ರಯಾಣವೇ? ಹೊಸವಾಹನವೇ? ಐಶ್ವರ್ಯವೇ? ಈ ಎಲ್ಲಾ ಕನಸುಗಳು ದೇವರ, ಯಾವ ವಿಧವಾದ ಆತ್ಮಿಕಸ್ಥಾನದಲ್ಲಿ ನೆಲೆಗೊಳ್ಳಬಹುದು? ಭವಿಷ್ಯದ ಕುರಿತು ಅನೇಕರು ಒಂದೇ ವಿಧವಾದ ಆಶೋತ್ತರಗಳನ್ನು ಹೊಂದಿರುವರು ದೈಹಿಕವಾದ ತೃಪ್ತಿ! ನಾವು ಈ ಭೂಲೋಕಕ್ಕೆ ಬಹುವಾಗಿ ಆತುಕೊಂಡವ ರಾಗಿ, ನಮ್ಮ ದೇವರನ್ನು ಭವಿಷ್ಯದ ಯೋಜನೆಯೆಂದು, ಬಹುದೂರ ಇಡುತ್ತೇವೆ.

4ನೇ ಅಧ್ಯಾಯದ ಅಂತ್ಯದಲ್ಲಿ, ಯಾಕೋಬನು "ದೇವರ ಚಿತ್ತದ" ಕುರಿತು ಚರ್ಚಿಸುತ್ತಾನೆ. ಈಗಾಗಲೇ, ಈ ಅಧ್ಯಾಯದಲ್ಲಿ ಸಭೆಯ ಸಮಸ್ಯೆಯ ಬಗ್ಗೆಯೂ ಮತ್ತು ಇತರರನ್ನು ನಿಂದಿಸುವ ಕುರಿತಾಗಿಯೂ ಅವನು ಮಾತನಾಡಿದ್ದಾನೆ. ಈಗ ದೇವರ ಚಿತ್ತವನ್ನೂ ತಿಳಿಸುವುದರ ಮೂಲಕ ಆ ವಿಷಯಗಳನ್ನು ಅಂತಿಮಗೊಳಿಸುತ್ತಾನೆ. ಸಹಜವಾಗಿ, ದೇವರ ಚಿತ್ತದಿಂದ ಹೊರಗಿರುವ ಮನುಷ್ಯನು ಅಪಾಯಕಾರಿಯಾಗಿರುತ್ತಾನೆ. ಬೈಬಲಿನ ಚರಿತ್ರೆಯ ಮೂಲಕ ಇದನ್ನು ಚರ್ಚಿಸಲಾಗಿದೆ: ಲೋಟನು ಸೋದೋಮಿಗೆ ಹೋಗುವದರ ಮೂಲಕ, ತನ್ನ ಕುಟುಂಬವನ್ನು ನಾಶಪಡಿಸಿಕೊಳ್ಳುವದಕ್ಕಿದ್ದನು, ದಾವೀದನ ವ್ಯಭೀಚಾರದ ಕೃತ್ಯವು ಅವನ ಕುಟುಂಬವನ್ನು ಮತ್ತು ಅವನ ರಾಜ್ಯವನ್ನು ತೊಂದರೆಗೆ ಸಿಲುಕಿಸಿತು, ಮತ್ತು ಯೋನನು ದೇವರಿಂದ ಓಡಿಹೋದದ್ದರಿಂದ, ಹಡಗನ್ನು ಮತ್ತು ಅದರ ನಾವಿಕರನ್ನು ನಾಶಪಡಿಸಲಿಕ್ಕಿದ್ದನು. ಈ ಪ್ರತಿಯೊಂದು ಘಟನೆಗಳಲ್ಲಿ, ದೇವರಿಗೆ ವಿರುದ್ಧವಾಗಿದ್ದ ಮನೋಭಾವದ ಪ್ರದರ್ಶನವನ್ನು ಕಾಣುತ್ತೇವೆ.

ಯಾಕೋಬನ ಮೂಲಕವಾಗಿ ಪರಿಶುದ್ಧಾತ್ಮನು ನಮ್ಮ ಅವಿಧೇಯತೆಯನ್ನು ಮತ್ತು ಸ್ವಾರ್ಥವನ್ನು ಖಂಡಿಸುತ್ತಿದ್ದಾನೆ. ದೇವರನ್ನು ಎಲ್ಲಾ ವಿಷಯದಲ್ಲಿ ಪ್ರಥಮವಾಗಿ ಇಟ್ಟುಕೊಳ್ಳಬೇಕೆಂಬ ಜೀವಿತವನ್ನು ಜೀವಿಸಬೇಕೆಂದು ಸೂಚಿಸಿದ್ದಾನೆ. ನಾವು ದೇವರನ್ನು ಹೊರತುಪಡಿಸಿ ಜೀವಿಸದಂತೆ ಮತ್ತು ದೇವರ ಚಿತ್ತದ ಕುರಿತು ಯೋಚಿಸುವಂತೆ ಅಂಶವನ್ನು ಯಾಕೋಬನು ತಿಳಿಸಿದ್ದಾನೆ.

## ದೇವರ ಚಿತ್ತವನ್ನು ಅಲಕ್ಷಿಸುವುದು ಅವಿವೇಕವಾಗಿದೆ (4:13-16)

ಪ್ರತಿ ದಿವಸದ ಜೀವಿತದಲ್ಲಿ ದೇವರ ಚಿತ್ತವನ್ನು ಅಲಕ್ಷಮಾಡುವ ಕುರಿತಾಗಿ, ಯಾಕೋಬನು ನಾವುಗಳು ದೇವರಿಗೆ ಯಾವ ರೀತಿಯಲ್ಲಿ ವಿಧೇಯರಾಗಿರಬೇಕೆಂದು ನಾಲ್ಕು ಕಾರಣಗಳನ್ನು ತಿಳಿಯಪಡಿಸಿದ್ದಾನೆ. *ನಾಳೆ ಏನಾಗುವದೋ ಮತ್ತು ನಮ್ಮ ಜೀವಿತವು ಎಂಥದ್ದಾಗಿರುವದೋ* ಎಂಬ ಸಂದೇಹವು ನಮಗಿರುವದರಿಂದ ವಚನ 13, "ಈ ಹೊತ್ತು ಇಲ್ಲವೆ ನಾಳೆ ನಾವು ಇಂತಹ ಪಟ್ಟಣಕ್ಕೆ ಹೋಗಿ ಅಲ್ಲಿ ಒಂದು ವರ್ಷವಿದ್ದು ವ್ಯಾಪಾರವನ್ನು ಮಾಡಿ ಲಾಭವನ್ನು ಸಂಪಾದಿಸುತ್ತೇವೆ," ಅನ್ನುವವರೇ ಕೇಳಿರಿ. ನಾಳೆ ಏನಾಗುವದೋ ನಿಮಗೆ ತಿಳಿಯದು ಎಂದು ಆಲೋಚಿಸುವವರಿಗೆ, "ಅವನು ಹೇಳುವದೇನೆಂದರೆ, ಒಂದು ಕ್ಷಣ ನಿಂತು, ಆಲೋಚಿಸಿರಿ." ನಮ್ಮ ಜೀವಿತದ ಕುರಿತು ಆಲೋಚಿಸೋಣ: ನಾವು ಕೊಂಡುಕೊಳ್ಳುತ್ತಿದ್ದೇವೆ, ಮಾರಾಟ ಮಾಡುತ್ತಿದ್ದೇವೆ, ಪುನಃ ಪಡೆದುಕೊಳ್ಳುತ್ತಿದ್ದೇವೆ, ಕಳೆದುಕೊಳ್ಳುತ್ತಿದ್ದೇವೆ, ಇಲ್ಲಿಗೆ ಹೋಗುತ್ತಿದ್ದೇವೆ, ಇಲ್ಲಿಗೆ ಹೋಗುತ್ತೇವೆ. ಪ್ರತಿ ದಿವಸ ಎಂತಂತಹ ನಿರ್ಧಾರಗಳನ್ನು ಮಾಡುತ್ತೇವೆ? ದೇವರು ಯಾಕೋಬನ ಮೂಲಕ ನಮ್ಮ ವ್ಯವಹಾರದ ಕುರಿತು ಖಂಡಿಸದೆ, ದೇವರ ಅನುಮತಿ ಇಲ್ಲದೆ ಮಾಡುವಂತದ್ದನ್ನು ಖಂಡಿಸುತ್ತಾನೆ. ದೇವರೊಂದಿಗಿನ ಜೀವಿತ ವಿವೇಕವು ಳ್ಳದ್ದು; ಆತನಿಲ್ಲದ ಜೀವಿತ ಅವಿವೇಕವುಳ್ಳದ್ದಾಗಿದೆ.

ಜೀವಿತವು ಸ್ವಲ್ಪ ಹೊತ್ತು ಕಾಣಿಸಿಕೊಳ್ಳುದು ಮಾತ್ರವಲ್ಲದೆ, ಅದು ಕಾಣದೆ ಹೋಗುವಂತಹದ್ದು ಎಂದು ಯಾಕೋಬನು ಎರಡನೆಯದಾಗಿ ತಿಳಿಸುತ್ತಿದ್ದಾನೆ. "ನಿಮ್ಮ ಜೀವಿತವು ಹಬೆಯಂತಿರುವದರಿಂದ ..." (4:14). ಜೀವಿತವು ಅಸ್ಥಿರವಾದದ್ದೆಂದು ವಾಕ್ಯವು ತಿಳಿಸುತ್ತದೆ (ಉದಾಹರಣೆ: ಜ್ಞಾನೋಕ್ತಿ 27:1). ಯೇಸು ಕ್ರಿಸ್ತನು ಸಹ ತನ್ನ ದೃಷ್ಟಾಂತದಲ್ಲಿ ಈ ಒಂದು ಅಂಶವನ್ನು ತೋರಿಸಿದ್ದಾನೆ (ಲೂಕ 12:16-21). ಈ ಪ್ರಪಂಚವು ಸಹ ಈ ವಿಧವಾದ ಜೀವಿತದ ಕೋನವನ್ನು, ಮೂಲಭೂತ ಅಂಶವೆಂದು ಪರಿಗಣಿಸಿರುತ್ತದೆ. ಸನೈಕಾ, ಎಂಬ ರೋಮ ತತ್ವಜ್ಞಾನಿಯ ಹೇಳಿಕೆಯಂತೆ, "ಮನುಷ್ಯನು ತನ್ನ ಜೀವಿತಕ್ಕೆ ಯೋಜನೆಗಳನ್ನು ಮಾಡಿಕೊಳ್ಳುವದು ಎಂತ ಮೂರ್ಖತನವಾಗಿದೆ ಯಾಕಂದರೆ ನಾಳೆಯೆಂಬುದು ಅವನ ಹತೋಟಿಯಲ್ಲಿರುವದಿಲ್ಲ." ಜೀವಿತದ ಪರಿಸ್ಥಿತಿಯನ್ನು ನಾವು ತಿಳಿದಿದಂತ

ಜನರು ಮತ್ತು ಈ ಲೋಕದ ಘಟನಾವಳಿಗಳು ಈ ಸತ್ಯಾಂಶಗಳನ್ನು ತೋರಿಸುತ್ತವೆ. ಅಸ್ಥಿರವಾದ ಭವಿಷ್ಯವು ನಮಗಿರುವದರಿಂದ ನಾವು ಕೂತುಕೊಂಡು ಏನನ್ನು ಮಾಡಬಾರದೆಂದು ಯಾಕೋಬನು ತಿಳಿಸುತ್ತಿಲ್ಲ. ನಮ್ಮ ಯೋಜನೆಗಳನ್ನು ಮತ್ತು ನಮ್ಮ ಭವಿಷ್ಯತ್ತನ್ನು ದೇವರ ಕೈಗೆ ಸಮರ್ಪಿಸಬೇಕು. ನಮ್ಮ ಭವಿಷ್ಯತ್ತನ್ನು ದೇವರಿಗೆ ಸಮರ್ಪಿಸುವದರಿಂದ ಮಾತ್ರ ನಾವು ನಿಶ್ಚಯವಾದ ಭವಿಷ್ಯತ್ತನ್ನು ಹೊಂದಿಕೊಳ್ಳಬಹುದು.

ನಂತರ ಯಾಕೋಬನು ನಮ್ಮ ಜೀವಿತವು *ಅಲ್ಪವಾಗಿರುವದರಿಂದ* ಎಂದು ವಿವರಿಸುತ್ತಾನೆ. ವಚನ 14ರ ಮುಂದಿನ ಭಾಗದಲ್ಲಿ ನೀವು ಸ್ವಲ್ಪಹೊತ್ತು ಕಾಣಿಸಿಕೊಂಡು ಆ ಮೇಲೆ ಕಾಣದೆ ಹೋಗುವ ಹಬೆಯಂತಿರುತ್ತೀರಿ, "... ಇಲ್ಲಿ ಅವನು ಯೋಬನ ಬರವಣಿಗೆಯಲ್ಲಿರುವ ಒಂದು ಚಿತ್ರಣವನ್ನು ತೋರಿಸುತ್ತಾನೆ" (ಯೋಬ 7:9). ಮುಖ್ಯವಾಗಿ ಭಾದೆಗಳುಂಟಾಗುವಂತ ದಿವಸಗಳಲ್ಲಿ, ದಿನಗಳು ಬೇಗನೇ ಕಳೆಯುತ್ತಿರಲಿಲ್ಲ, ಜೀವನವು ಎಷ್ಟು ಅಲ್ಪವಾಗಿದೆ ಎಂಬ ತಿಳುವಳಿಕೆಯನ್ನು ಅವನು ಹೊಂದಿದ್ದನು (ಯೋಬ 7:6; 8:9; 9:25; 14:1, 2). ಸಮಯದ ಅಂತಿಮ ಲೆಕ್ಕದಲ್ಲಿ, ಜೀವನವು ವಿಸ್ತಾರವಾಗಿದೆ, ಅದು ವಿಸ್ತಾರವಾಗಿರುವದರಿಂದ ನಾವುಗಳು ಲೆಕ್ಕ ಕೊಡುವ ಅವಶ್ಯವಿಲ್ಲವೆಂದು ತಿಳಿಯುತ್ತೇವೆ. ನಾವು ಸ್ತಬ್ದರಾಗಿರಬೇಕೆಂದು ಸಹೆಯನ್ನು ನೀಡುತ್ತಿಲ್ಲ ಆದರೆ ನಮ್ಮ ಜೀವಿತದ ಕುರಿತಾದ, ಸತ್ಯವನ್ನು ಅರಿತುಕೊಳ್ಳಬೇಕು. ನಮ್ಮ ಸಮಯವನ್ನು ಕಳೆಯುವದಕ್ಕಿಂತಲೂ, ವ್ಯರ್ಥಮಾಡುವದಕ್ಕಿಂತಲೂ, ನಿತ್ಯತ್ವಕ್ಕಾಗಿ ಅವುಗಳನ್ನು ಕೂಡಿಸಿಟ್ಟುಕೊಳ್ಳಬೇಕು. ದೇವರ ಚಿತ್ತಕ್ಕೆ ವಿಧೇಯರಾಗುವದರಿಂದ ನಮ್ಮ ಜೀವಿತವನ್ನು ದೇವರ ಕಾರ್ಯಕ್ಕೆ ಹೂಡುವವರಾಗಿರುತ್ತೇವೆ.

ನಾಲ್ಕನೆಯದಾಗಿ, ವಚನ 16ರಲ್ಲಿ, ಮನುಷ್ಯನು ತನ್ನ ದೌರ್ಬಲ್ಯವನ್ನು ಯಾವ ರೀತಿಯಾಗಿ ಅಡಗಿಸಿಕೊಂಡಿದ್ದಾನೆ ಎಂಬ ದೃಷ್ಟಾಂತವನ್ನು ನೀಡುತ್ತಾನೆ. "ನೀವು ಅಹಂಭಾವದಿಂದ ಹೊಗಳಿಕೊಳ್ಳುತ್ತೀರಿ; ಅಂತಹ ಹೊಗಳಿಕೆಯೆಲ್ಲ ಕೆಟ್ಟದ್ದೆ." ನಮ್ಮ ಬಲಹೀನತೆಯನ್ನು ಮತ್ತು ಅಭದ್ರತೆಯನ್ನು ಅಡಗಿಸಿಕೊಳ್ಳುವದಕ್ಕಾಗಿ ಹೊಗಳಿಕೆಯನ್ನು ಮಾಡಿಕೊಳ್ಳುತ್ತೇವೆ. ನಮ್ಮ ಭವಿಷ್ಯದ ಕುರಿತು ಏನು ಮಾಡಬಹುದು? ಅದನ್ನು ಗ್ರಹಿಸುವದಾಗಲಿ ಅಥವಾ ಅದನ್ನು ಹತೋಟಿಯಲ್ಲಿಡುವ ವಿವೇಕವನ್ನಾಗಲಿ ಹೊಂದಿರುವದಿಲ್ಲ. ಆದಾಗ್ಯೂ ನಾವು ಅದರ ಮೇಲೆ ಹತೋಟಿಯನ್ನು ಸಾಧಿಸಿದ್ದೇ ವೆಂದು ಗ್ರಹಿಸಿದ್ದೇವೆ. ಹೊಗಳಿಕೊಳ್ಳುವದರ ಮೂಲಕ ನಮ್ಮನ್ನು ದೇವರ ಸ್ಥಾನಕ್ಕೆ ಹೋಲಿಸಿಕೊಳ್ಳುವಂಥದ್ದೆ ನಮ್ಮ ಸಮಸ್ಯೆಯಾಗಿದೆ. ಭವಿಷ್ಯದಲ್ಲಿ ನಾವು ಏನನ್ನಾದರೂ ಮಾಡುತ್ತೇವೆಂದು ಹೊಗಳಿಕೊಳ್ಳುತ್ತೇವೆ, ಆದರೆ ದೇವರ ಚಿತ್ತವನ್ನು ಪರಿಗಣಿಸುವದಿಲ್ಲ ಇಂತ ಹೊಗಳಿಕೆಯು ಪಾಪವೆಂದು ಸರಳವಾಗಿ ಮತ್ತು *ನೇರವಾಗಿ ತಿಳಿಸುತ್ತಾನೆ*!

ದೇವರ ಚಿತ್ತವನ್ನು ಅಲಕ್ಷ ಮಾಡುವದರ ಮೂಲಕ ಮನುಷ್ಯನು ತಾನು ಎಂತೆಂತ ಮೂರ್ಖತನದ ಪಾಠಗಳನ್ನು ಕಲಿತಿರುವನು. ದಾರಿ ತಿಳಿಯದ ಕಾಡಿನಲ್ಲಿ ಮಾರ್ಗದರ್ಶಕರಿಲ್ಲದೆ ನಡೆಯುವಂತೆಯು ಅಥವಾ ಬಿರುಗಾಳಿಯಿಂದ ತುಂಬಿದ ಸಮುದ್ರದ ಮೇಲೆ ಚುಕ್ಕಾಣಿ ಇಲ್ಲದೆ ಹಾರುವಂತ ಪರಿಸ್ಥಿತಿ ಇದಾಗಿರುತ್ತದೆ. ಜೀವಿತದ ಕುರಿತಾಗಿ ನಮ್ಮ ಮನೋಭಾವಗಳು ಹೇಗಿರಬೇಕೆಂದು ಯಾಕೋಬನು ಕ್ಲುಪ್ತವಾಗಿ ತಿಳಿಸುತ್ತಾನೆ: "ಆದುದರಿಂದ ನೀವು ಅಂತಹ ಮಾತನ್ನು ಬಿಟ್ಟು ದೇವರ ಚಿತ್ತವಾದರೆ ನಾವು ಬದುಕಿ ಈ ಕೆಲಸವನ್ನಾಗಲಿ ಆ ಕೆಲಸವನ್ನಾಗಲಿ ಮಾಡುವೆವು ಎಂದು ಹೇಳಬೇಕು" (4:15). ಯಾಕೋಬನು ಈ ಹೇಳಿಕೆಯನ್ನು ಸಂಸ್ಕತದಂತಾಗಲಿ, ಸೂತ್ರದಂತಾಗಲಿ ಆಲೋಚನೆ ಇಲ್ಲದೆ ಪುನರಾವರ್ತನೆಯನ್ನಾಗಿ ನೀಡುತ್ತಿರುವದಿಲ್ಲ. ಇದು ಹೃದಯದ ಭಾವೋದ್ವೇಗವಾಗಿರಬೇಕು. ನಾವು ಹೇಳದಿದ್ದರೂ ಅಥವಾ ಯೋಚಿಸದಿದ್ದರೂ ನಮ್ಮ ಜೀವನದ ಕ್ರಮವನ್ನು ಯೋಜಿಸುವದಕ್ಕೆ ದೇವರಿಗೆ ಸಕಲ ಹಕ್ಕುಗಳನ್ನು ನೀಡಬೇಕು.

## ದೇವರ ಚಿತ್ತವನ್ನು ಅಲಕ್ಷಿಸುವದು ಪಾಪವಾಗಿದೆ (4:17)

ಯಾಕೋಬ 4:17ರ ವಚನವನ್ನು ಆಸಕ್ತಿಕರವಾದ ವಚನವನ್ನಾಗಿ ಪ್ರತಿಯೊಬ್ಬ ಪ್ರಸಂಗಿಯು ಉಪಯೋಗಿಸುತ್ತಾರೆ: "ಹೀಗಿರುವದರಿಂದ ಒಳ್ಳೇದನ್ನು ಮಾಡಬೇಕೆಂದು ತಿಳಿದು ಅದನ್ನು ಮಾಡದೇ ಇರುವವನು ಪಾಪಕ್ಕೆ ಒಳಗಾಗಿದ್ದಾನೆ ಎಂದು ಯಾಕೋಬನು ತಿಳಿಸುತ್ತಾನೆ," ಸಹೋದರರರನ್ನು ಸರಿಪಡಿಸುವದಕ್ಕಾಗಿ ಪ್ರಸಂಗಿಗಳಿಗೆ ಈ ವಚನಗಳನ್ನು ನೀಡಿದ್ದಾನೆ. ಪ್ರಸಂಗಿಯು ತಕ್ಕ ಸಮಯಕ್ಕೆ ಈ ವಚನವನ್ನು ನೀಡಲಾಗಿದೆ: ಸಭೆಯ ಸೇರಿ ಬರೋಣದಲ್ಲಿ, ಆತ್ಮಗಳನ್ನು ಗೆಲ್ಲುವ ವಿಷಯಗಳಲ್ಲಿ ಈ ವಚನ ಅನುಕೂಲವಾಗಿದೆ. ಎಂದು ಪ್ರಸಂಗಿಗಳು ಇದನ್ನು ಉಪಯೋಗಿಸುತ್ತಾರೆ. ಅದು ಸರಿಯಾದದ್ದೆ ಇರಬಹುದು ಅಥವಾ ಕ್ರಮವು ಇರಬಹುದು, ಆದರೆ ಯಾಕೋಬನು ಈ ಕುರಿತಾಗಿ ಮಾತನಾಡುತ್ತಿಲ್ಲ.

ವಚನ 13 ಮತ್ತು 16ರಲ್ಲಿ ಹೇಳಿರುವ ವಾಕ್ಯದ ಪ್ರಬೋಧನೆಗೆ ಅನುಕೂಲವಾಗುವಂತೆ ವಚನ 17ನ್ನು ಅರ್ಥಮಾಡಿಕೊಳ್ಳ ತಕ್ಕದ್ದು. ಯಾವ ಸಹೋದರರು ತಮ್ಮ ಪ್ರತಿ ನಿತ್ಯದ ಜೀವಿತದಲ್ಲಿ ದೇವರನ್ನು ಒಳಪಡಿಸಿಕೊಳ್ಳಲಿಲ್ಲವೋ, ಅಂತಹ ಯೋಚನೆಗಳಿಲ್ಲದ ಸಹೋದರರಿಗೆ ಈ ವಾಕ್ಯವನ್ನು ಬರೆಯುತ್ತಿದ್ದಾನೆ. ಅವರು ಕಾರ್ಯಗಳು ತಪ್ಪಾಗಿಲ್ಲದೆ ಹೋದರು, ಅವರು ದೇವರ ಬೆತ್ತವನ್ನೂ ಹಾಗೂ ದೇವರನ್ನು ಅಲಕ್ಷಮಾಡಿದ ಸಂಗತಿಯು ತಪ್ಪಾಗಿರುತ್ತದೆ. ಇಂತಹ ಬಲೆಗೆ ಸಿಕ್ಕಿಕೊಳ್ಳುವದು ಕಷ್ಟಕರವಲ್ಲ. ಜೀವಿತವು ವೇಗಗೊಳ್ಳುತ್ತದೆ. ಮತ್ತು ಬೇಸರದಿಂದ ಪರಿತಪಿಸುತ್ತದೆ. ಇಂತಹ ಸಮಯದಲ್ಲಿ ಸಫಲರಾಗಲು ಕೆಲವು ಯೋಜನೆಗಳನ್ನು ಮಾಡಿಕೊಳ್ಳುತ್ತೇವೆ. ಮತ್ತು ನಮ್ಮ ದೃಷ್ಟಿ ಕೋನವು ದೇವರಿಂದ ಬದಲಾಗುತ್ತದೆ. ಅವರಲ್ಲಿ ಕಂಡು ಬಂದ ಅಲಕ್ಷತನವು ಮತ್ತು ಅವರ ಸೂಚನೆಗಳು ನಮಗೂ ಸಹ ಅನ್ವಯಿಸುತ್ತವೆ. ನಮ್ಮ ಜೀವಿತದ ಮಾರ್ಗಗಳಲ್ಲಿರುವ ತಪ್ಪುಗಳನ್ನು ಕಂಡು ಹಿಡಿಯಬೇಕೆಂದು ಅವನು ಬಯಸುತ್ತಾನೆ. ಫಿಲಿಪ್ಸ್ ಬೈಬಲ್‌ನ ಅನುವಾದವು, "ಮೇಲ್ಕಂಡ ವಿಷಯಗಳನ್ನು ಸಂದೇಹವಿಲ್ಲದೆ ಒಪ್ಪುವಿರಿ. ಮನುಷ್ಯನು ಸರಿಯಾದದ್ದು ಏನೆಂದು ತಿಳುಕೊಂಡು ಮತ್ತು ಅದನ್ನು ಮಾಡುವದರಲ್ಲಿ ಸೋತು ಹೋದರೆ, ಅವನ ಸೋಲುವಿಕೆಯೇ ನಿಜವಾದ ಪಾಪವಾಗಿರುತ್ತದೆ."

## ಮುಕ್ತಾಯ

ಜೀವಿತವು ದೇವರಿಂದ ದೊರಕಿದ ವರವಾಗಿರುತ್ತದೆ. ಅದನ್ನು ದೇವರ ಮಹಿಮೆಗಾಗಿ ಪ್ರಾಯೋಜಿಸಬೇಕು. ಸಲೊಮೋನನು ಈ ವಿಷಯವನ್ನು ನೆತ್ತಿಗೆ ಚುಚ್ಚದ ರೀತಿಯಲ್ಲಿ ತಿಳಿಸಿದ್ದಾನೆ, "ವಿಷಯವು ತೀರಿತು; ಎಲ್ಲವೂ ಕೇಳಿ ಮುಗಿಯಿತು; ದೇವರಿಗೆ ಭಯಪಟ್ಟು ಆತನ ಆಜ್ಞೆಗಳನ್ನು ಕೈಕೊಂಡು; ಮನುಷ್ಯರೆಲ್ಲರ (ಕರ್ತವ್ಯವು) ಇದೆ (ಪ್ರಸಂಗಿ 12:13). ದೇವರ ಸಹಾಯವಿಲ್ಲದೆ ನಮ್ಮ ಜೀವಿತವನ್ನು ರೂಪಿಸಿಕೊಳ್ಳುದು ತಪ್ಪಾಗುತ್ತದೆ.